ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಕರ್ನಾಟಕ ಸರ್ಕಾರ,
ಬಹುಮಹಡಿಗಳ ಕಟ್ಟಡ, ಗೇಟ್-4,
ಪಿ.ಬಿ. ನಂ. 5257,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು-560001.

ಕರ್ನಾಟಕ ಸರ್ಕಾರ

# ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ


ಬಹುಮಹಡಿಗಳ ಕಟ್ಟಡ, ಗೇಟ್-4, ಪಿ.ಬಿ.ನಂ.5257, ಡಾ|| ಬಿ.ಅಂಬೇಡ್ಕರ್ ವೀಧಿ. ಬೆಂಗಳೂರು-560001
ದೂರವಾಣಿ ಸಂಖ್ಯೆ: 22253976, 22353976, ಫ್ಯಾಕ್ಸ್ ಸಂಖ್ಯೆ: 22389519 ಇ.-ಮೈಲ್:dtcp@karnataka.gov.in, ವೆಬ್‌ಸೈಟ್: www.dtcp.gov.in


ಸಂ: ನಗ್ರಾಯೋ/ಲೆವಿ(2)/02/ವಾ.ವ/2023 /1347

23 MAY 2023

ಜಂಟಿ ನಿರ್ದೇಶಕರು, (ಯೋಜನೆ)
ಮತ್ತು ಪದನಿಮಿತ್ತ ಸರ್ಕಾರದ
ಉಪ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ,
ಬೆಂಗಳೂರು.

**ಮಾನ್ಯರೆ,**

ವಿಷಯ:- 2022-23ನೇ ಸಾಲಿನ ವಾರ್ಷಿಕ ವರದಿಯನ್ನು ಸಲ್ಲಿಸುವ ಬಗ್ಗೆ.

*****

ವಿಷಯಕ್ಕೆ ಸಂಬಂಧಿಸಿದಂತೆ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ 2022-23ನೇ ಸಾಲಿನ ವಾರ್ಷಿಕ ವರದಿಯನ್ನು ದಿ:01-04-2022 ರಿಂದ 31-03-2023ರ ಅಂತ್ಯಕ್ಕೆ ಇಂಧೀಕರಿಸಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಸಾಫ್ಟ್ ಮತ್ತು ಹಾರ್ಡ್ ಪ್ರತಿಗಳನ್ನು ಈ ಪತ್ರಕ್ಕೆ ಲಗತ್ತಿಸಿ ಸರ್ಕಾರದ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,
ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರು

**<u>ಪ್ರತಿಯನ್ನು</u>:-** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸೌಧ, ಬೆಂಗಳೂರು.

o/c

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರು

23/05/23
ರವಾನಿಸಲಾಗಿದೆ

E:\BHAGYA COPY/Annual Reports - Kannada 2021-22/LV (1)/SL- 20

# ಕರ್ನಾಟಕ ಸರ್ಕಾರ

## ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ
## 2022-23ನೇ ಸಾಲಿನ ವಾರ್ಷಿಕ ವರದಿ


## ನಗರಮತ್ತುಗ್ರಾಮಾಂತರಯೋಜನಾನಿರ್ದೇಶನಾಲಯ,
## ಬೆಂಗಳೂರು

**ದೂರವಾಣಿ ಸಂಖ್ಯೆ: 080-22353976, 22258988, 22353974 ಫ್ಯಾಕ್ಸ್ ಸಂಖ್ಯೆ: 22389519**

**e-mail: dtcp@karnataka.gov.in, Webiste: www.dtcp.gov.in**

# ನಗರಮತ್ತುಗ್ರಾಮಾಂತರಯೋಜನಾಇಲಾಖೆಯಆಡಳಿತವ್ಯವಸ್ಥೆ



ಕರ್ನಾಟಕ ಸರ್ಕಾರ
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ

# ನಗರಮತ್ತುಗ್ರಾಮಾಂತರಯೋಜನಾಇಲಾಖೆ 2022-23ನೇಸಾಲಿನವಾರ್ಷಿಕವರದಿ

## 1. ಪೀಠಿಕೆ:

ಇಲಾಖೆಯ ಕೇಂದ್ರ ಕಛೇರಿಯು ಬೆಂಗಳೂರಿನಲ್ಲಿದ್ದು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಇಲಾಖೆಯು 2022-23 ನೇ ಸಾಲಿನ ಅವಧಿಯಲ್ಲಿ ಈ ಕೆಳಕಂಡ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸಿರುತ್ತದೆ.

ಶ್ರೀ ಎಲ್. ಶಶಿಕುಮಾರ್ - 01-04-2022 ರಿಂದ 31-03-2023

ಈ ಇಲಾಖೆಯ ಒಂದು ವಲಯ ಕಛೇರಿಯು ಧಾರವಾಡದಲ್ಲಿ ಮತ್ತು ಮೂರು ವಿಭಾಗೀಯ ಕಛೇರಿಗಳು, ಬೆಂಗಳೂರು, ಮೈಸೂರು ಹಾಗೂ ಕಲಬುರಗಿಯಲ್ಲಿದ್ದು, ಧಾರವಾಡ ವಲಯ ಕಛೇರಿಯು ನಗರ ಮತ್ತು ಗ್ರಾಮಾಂತರ ಯೋಜನಾ ಅಪರ ನಿರ್ದೇಶಕರು ಇವರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಉಳಿದ ಮೂರು ವಿಭಾಗೀಯ ಕಛೇರಿಗಳು ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಜೊತೆಗೆ ಇಲಾಖೆಯ 30 ಶಾಖಾ ಕಛೇರಿಗಳು ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ ಜಿಲ್ಲಾ ಕೇಂದ್ರ ಹಾಗೂ ಇತರ ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿದ್ದು, ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

### 1.1 ಇಲಾಖೆಯ ಕಾರ್ಯಚಟುವಟಿಕೆಗಳು :

ರಾಜ್ಯದ ನಗರ : ಪಟ್ಟಣ ಹಾಗೂ ಗ್ರಾಮಗಳ ಯೋಜಿತ ಬೆಳವಣಿಗೆಗಾಗಿ ಮಹಾ ಯೋಜನೆಗಳನ್ನು ಸಿದ್ಧಪಡಿಸಿ, ಈ ಯೋಜನೆಗಳನ್ನು ಜಾರಿಗೊಳಿಸುವುದು ಇಲಾಖೆಯ ಪ್ರಮುಖ ಕಾರ್ಯವಾಗಿರುತ್ತದೆ.

**ಇಲಾಖೆಯ ಪ್ರಮುಖ ಚಟುವಟಿಕೆಗಳನ್ನು ಈ ಕೆಳಗೆ ವಿವರಿಸಲಾಗಿದೆ.**

1. **ನಗರ :** ಪಟ್ಟಣ ಮತ್ತು ಅಭಿವೃದ್ಧಿ ಪಥದಲ್ಲಿ ಇರುವ ಗ್ರಾಮಗಳ ಭೌತಿಕ, ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷಣೆ ಮಾಡಿ ಮಹಾಯೋಜನೆ (ಮಾಸ್ಟರ್ ಪ್ಲಾನ್)ಗಳನ್ನು ಸಿದ್ಧಪಡಿಸುವುದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದಡಿ ಈ ಯೋಜನೆಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಅಂಗೀಕಾರ ಪಡೆಯುವುದು.

2. **ಪಟ್ಟಣ ಮತ್ತು ಗ್ರಾಮ ವಿಸ್ತರಣಾ (ಬಡಾವಣೆ) ಯೋಜನೆ :** ಅಭಿವೃದ್ಧಿ ಸುಧಾರಣಾ ಯೋಜನೆಗಳು : ಪುನರ್ವಸತಿ ಯೋಜನೆಗಳು : ಆಶ್ರಯ ಯೋಜನೆಗಳು : ಮತ್ತಿತರ ಯೋಜನೆಗಳನ್ನು ತಯಾರಿಸುವುದು.

3. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ನಿಯಮಗಳನ್ನು ಅನುಷ್ಠಾನಕ್ಕೆ ತರುವ ವಿಷಯದಲ್ಲಿ ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ಹಾಗೂ ಯೋಜನೆಗಳನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಮತ್ತು ನಗರ ಯೋಜನಾ ಪ್ರಾಧಿಕಾರಗಳಿಗೆ ಯೋಜನಾ ವಿಷಯಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ನೆರವು ನೀಡುವುದು.

4. ರಾಜ್ಯ ಸರ್ಕಾರ ರಚಿಸಿರುವ ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ, ಮತ್ತಿತರ ಸಂಸ್ಥೆಗಳಿಗೆ ಯೋಜನಾ ವಿಷಯಗಳಿಗೆ ಸಂಬಂಧಿಸಿದಂತೆ ನೆರವು ನೀಡುವುದು.

5. **<u>ಸರ್ಕಾರಿ ಇಲಾಖೆಗಳು: ಅರೆ ಸರ್ಕಾರಿ ಸಂಸ್ಥೆಗಳು :</u>** ಸ್ಥಳೀಯ ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳ ಕೋರಿಕೆ ಮೇರೆಗೆ ವಿನ್ಯಾಸ ರೂಪಿಸಿ ತಾಂತ್ರಿಕ ಅನುಮೋದನೆ ನೀಡುವುದು.

6. **<u>ವ್ಯವಸಾಯ ಭೂಮಿಯನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಪರಿವರ್ತಿಸಲು ಕಂದಾಯ ಇಲಾಖೆಗೆ ತಾಂತ್ರಿಕ ಅಭಿಪ್ರಾಯ :</u>** ನೆರವು ನೀಡುವುದು.

7. ಸುವ್ಯವಸ್ಥಿತ, ಸುರಕ್ಷಿತ ಹಾಗೂ ಸಮರ್ಥ ಸಂಚಾರ ನಿರ್ವಹಣಾ ಯೋಜನೆಗಳನ್ನು ರೂಪಿಸುವುದು ಮತ್ತು ಅವುಗಳನ್ನು ಕಾರ್ಯಗತಗೊಳಿಸಲು ಸಲಹೆ ನೀಡುವುದು.

### 1.2. <u>ಶಾಸನಬದ್ಧ ಕಾರ್ಯಗಳು:</u>

**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ನ್ನು ರಾಜ್ಯದಲ್ಲಿನ 162 ನಗರ :** ಪಟ್ಟಣ ಪ್ರದೇಶಗಳಿಗೆ ವಿಸ್ತರಿಸಿ, ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ ಹಾಗೂ ಪ್ರಾಧಿಕಾರವನ್ನು ರಚಿಸಲಾಗಿದೆ. ಅದರಂತೆ ಒಟ್ಟಾರೆ ರಾಜ್ಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಹೊರತುಪಡಿಸಿ 32 ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು 54 ನಗರ ಯೋಜನಾ ಪ್ರಾಧಿಕಾರಗಳು ಕಾರ್ಯನಿರ್ವಹಿಸಿರುತ್ತಿವೆ ಹಾಗೂ 76 ಪಟ್ಟಣಗಳಿಗೆ ಸಂಬಂಧಿಸಿದಂತೆ ನಗರ ಸಭೆ : ಪುರಸಭೆ : ಪಟ್ಟಣ ಪಂಚಾಯ್ತಿಗಳೇ ನಗರ ಯೋಜನಾ ಪ್ರಾಧಿಕಾರಗಳಾಗಿ ಕಾರ್ಯನಿರ್ವಹಿಸುತ್ತಿವೆ.

### 1.2.1. <u>ನಗರಾಭಿವೃದ್ಧಿ ಪ್ರಾಧಿಕಾರಗಳು:</u>

ರಾಜ್ಯ ಸರ್ಕಾರ ನಗರ : ಪಟ್ಟಣಗಳ ಅಭಿವೃದ್ಧಿಗಾಗಿ ಅಗತ್ಯವಾದ ಮಹಾಯೋಜನೆಗಳನ್ನು ಜಾರಿಗೊಳಿಸಲು ಅವಕಾಶವಾಗುವಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ಅಡಿಯಲ್ಲಿ 32 ನಗರ : ಪಟ್ಟಣಗಳಿಗೆ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ, 1976 ರ ಅಡಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ಈ ಕೆಳಕಂಡ 32 ನಗರ : ಪಟ್ಟಣಗಳಿಗೆ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲಾಗಿದೆ.

| | | | |
|---|---|---|---|
| 1. | ಬೆಂಗಳೂರು | 17. | ಕೊಪ್ಪಳ |
| 2. | ಬೆಳಗಾವಿ | 18. | ಮಡಿಕೇರಿ |
| 3. | ಬಳ್ಳಾರಿ | 19. | ಮಂಡ್ಯ |
| 4. | ಬೀದರ್ | 20. | ಮಂಗಳೂರು |
| 5. | ವಿಜಯಪುರ | 21. | ಮೈಸೂರು |
| 6. | ಚಾಮರಾಜನಗರ-ರಾಮಸಮುದ್ರ | 22. | ರಾಮನಗರ |
| 7. | ಚಿತ್ರದುರ್ಗ | 23. | ರಾಯಚೂರು |
| 8. | ಚಿಕ್ಕಮಗಳೂರು | 24. | ಶಿವಮೊಗ್ಗ-ಭದ್ರಾವತಿ |
| 9. | ದಾವಣಗೆರೆ-ಹರಿಹರ | 25. | ತುಮಕೂರು |
| 10. | ಗದಗ-ಬೆಟಗೇರಿ | 26. | ಉಡುಪಿ-ಮಲ್ಪೆ |
| 11. | ಕಲಬುರಗಿ | 27. | ಹುಬ್ಬಳ್ಳಿ-ಧಾರವಾಡ |
| 12. | ಹಾಸನ | 28. | ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ತೋರಣಗಲ್ಲು (VADA) |
| 13. | ಹಾವೇರಿ | 29. | ಹೊಸಪೇಟೆ |
| 14. | ಕಾರವಾರ | 30. | ಚಿಕ್ಕಬಳ್ಳಾಪುರ |
| 15 | ಕೋಲಾರ | 31. | ಯಾದಗಿರಿ |
| 16. | ಕೆ.ಜಿ.ಎಫ್. | 32. | ಬಾಗಲಕೋಟೆ |

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ಈ ಪ್ರಾಧಿಕಾರಗಳು ಯೋಜನಾ ಕಾರ್ಯನಿರ್ವಹಿಸುತ್ತಿದ್ದು, ಆಯಾ ನಗರ : ಪಟ್ಟಣಗಳ ಮಹಾಯೋಜನೆಗಳನ್ನು ಸಿದ್ಧಪಡಿಸಿ ಇವುಗಳನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳುತ್ತಿವೆ.

ಇಲಾಖೆಯನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು,ಅಪರ ನಿರ್ದೇಶಕರು/ ಜಂಟಿ ನಿರ್ದೇಶಕರು/ಉಪ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರು ಈ ಕೆಳಕಂಡ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಪೂರ್ಣಾವಧಿ ನಗರ ಯೋಜಕ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
2. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ
3. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
4. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು
5. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು
6. ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
7. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ
8. ಶಿವಮೊಗ್ಗ – ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ
9. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ, ಉಡುಪಿ
10. ಹಾಸನ ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ
11. ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರ, ಕೆ.ಜಿ.ಎಫ್
12. ದಾವಣಗೆರೆ – ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ
13. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ
14. ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ

15. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ, ಬೀದರ್
16. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು
17. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ
18. ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳ
19. ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರ, ಯಾದಗಿರಿ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ, 1976ರ ಅಡಿಯಲ್ಲಿ ಸ್ಥಾಪಿಸಲಾಗಿದ್ದು, ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಬೆಂಗಳೂರು ನಗರದ ಮಹಾಯೋಜನೆಯ ತಯಾರಿಕೆ ಮತ್ತು ಕಾರ್ಯಾನುಷ್ಠಾನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಈ ಇಲಾಖೆಯ ನಿರ್ದೇಶಕರ ತತ್ಸಮಾನ ವೃಂದದ ಅಧಿಕಾರಿಯವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಗರ ಯೋಜಕ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹುಬ್ಬಳ್ಳಿ-ಧಾರವಾಡ, ಮೈಸೂರು, ಮಂಗಳೂರು, ಕಲಬುರಗಿ, ಬೆಳಗಾವಿ, ತುಮಕೂರು, ದಾವಣಗೆರೆ-ಹರಿಹರ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಮತ್ತು ಕೆ.ಜಿ.ಎಫ್, ಶಿವಮೊಗ್ಗ-ಭದ್ರಾವತಿ, ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು ಹಾಗೂ ಉಡುಪಿ, ಚಿಕ್ಕಮಗಳೂರು, ಚಿತ್ರದುರ್ಗ ಯಾದಗಿರಿ, ಹಾಸನ, ಕೊಪ್ಪಳ, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ನಗರ ಯೋಜಕ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಇನ್ನುಳಿದ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಈ ಇಲಾಖೆಯ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರುಗಳು ಇಲಾಖೆಗೆ ಸಂಬಂಧಿಸಿದ ಕೆಲಸ ಕಾರ್ಯಗಳ ಜೊತೆಗೆ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ನಗರಾಭಿವೃದ್ಧಿ ಪ್ರಾಧಿಕಾರಗಳ ಸಮವರ್ತಿ ಪ್ರಭಾರದಲ್ಲಿ ನಗರ ಯೋಜಕ ಸದಸ್ಯರಾಗಿಯೂ ಕೆಲಸ ನಿರ್ವಹಿಸುತ್ತಿದ್ದಾರೆ. ಇಲಾಖೆಯ ಸಹಾಯಕ ನಿರ್ದೇಶಕರುಗಳ ಕಚೇರಿಯ ಸಿಬ್ಬಂದಿ ಸಹ ಈ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಮಹಾಯೋಜನೆಯನ್ನು ರೂಪಿಸಲು ನೆರವು ನೀಡುತ್ತಿದ್ದಾರೆ.

### 1.2.2 <u>ಯೋಜನಾ ಪ್ರಾಧಿಕಾರಗಳು :</u>

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ರಚಿತವಾದ ಯೋಜನಾ ಪ್ರಾಧಿಕಾರಗಳು ಸಂಬಂಧಪಟ್ಟ ನಗರ: ಪಟ್ಟಣಗಳ ಮಹಾಯೋಜನೆಗಳನ್ನು ಸಿದ್ದಪಡಿಸಿ ಕಾರ್ಯಗತ ಗೊಳಿಸುವಲ್ಲಿ ಕ್ರಮ ಕೈಗೊಳ್ಳುತ್ತಿವೆ. ಪ್ರಸ್ತುತ, ರಾಜ್ಯದಲ್ಲಿ ಈ ಕೆಳಗೆ ನಮೂದಿಸಿರುವ 54 ನಗರ : ಪಟ್ಟಣಗಳಿಗೆ ಯೋಜನಾ ಪ್ರಾಧಿಕಾರಗಳನ್ನು ರಚಿಸಲಾಗಿದೆ.

| | | | |
|---|---|---|---|
| 1. | ಬಾದಾಮಿ | 28. | ಮಾಲೂರು |
| 2. | ಬಸವಕಲ್ಯಾಣ | 29. | ಕುಂದಾಪುರ |
| 3. | ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರ | 30. | ಚಿತ್ತಾಪುರ |
| 4. | ಚಿಂತಾಮಣಿ | 31. | ಮಳವಳ್ಳಿ |
| 5. | ಗಂಗಾವತಿ | 32. | ಸುರಪುರ |
| 6. | ಗೋಕಾಕ್ | 33. | STRR |

| | | | |
|---|---|---|---|
| 7. | ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ | 34. | ಬಂಟ್ವಾಳ |
| 8. | ಜಮಖಂಡಿ | 35. | ಅರಕಲಗೂಡು |
| 9. | ಕನಕಪುರ | 36. | ವಾಡಿ ಶಹಾಬಾದ್ |
| 10. | ಮಾಗಡಿ | 37. | ಗೌರಿಬಿದನೂರು |
| 11. | ನೆಲಮಂಗಲ | 38. | ಇಳಕಲ್ |
| 12. | ನಿಪ್ಪಾಣಿ | 39. | ಶಿಡ್ಲಘಟ್ಟ |
| 13. | ಪುತ್ತೂರು | 40. | ಗ್ರೇಟರ್ ಬೆಂಗಳೂರು-ಬಿಡದಿ ಸ್ಮಾರ್ಟ್ ಸಿಟಿ |
| 14. | ರಾಣೆಬೆನ್ನೂರು | 41. | ಶಿರಾ |
| 15. | ರಬಕವಿ-ಬನಹಟ್ಟಿ | 42. | ತಿಪಟೂರು |
| 16. | ಶಿರಸಿ | 43. | ಅರಸೀಕೆರೆ |
| 17. | ಸಿಂಧನೂರು | 44. | ಕಾಪು |
| 18. | ಶಹಾಪುರ | 45. | ಸೇಡಂ |
| 19. | ಕೆ.ಆರ್.ನಗರ | 46. | ಹುಣಸೂರು |
| 20. | ಮಾನ್ವಿ | 47. | ಮುಧೋಳ |
| 21. | ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ | 48. | ರಾಮದುರ್ಗ |
| 22. | ಆನೇಕಲ್ | 49. | ಕುಣಿಗಲ್ |
| 23. | ಹೊಸಕೋಟೆ | 50. | ಚನ್ನಪಟ್ಟಣ |
| 24. | ಬೇಲೂರು-ಹಳೇಬೀಡು | 51. | ದೊಡ್ಡಬಳ್ಳಾಪುರ |
| 25. | ಚನ್ನರಾಯಪಟ್ಟಣ | 52. | ಲಿಂಗಸೂಗೂರು |
| 26. | ಕುಶಾಲನಗರ | 53 | ಚೆನ್ನೈ-ಬೆಂಗಳೂರು ಇಂಡಸ್ಟ್ರಿಯಲ್ ಕಾರಿಡಾರ್ |
| 27. | ಮೂಡಬಿದ್ರೆ | 54 | ಸಾಗರ |

ಗ್ರೇಟರ್ ಬೆಂಗಳೂರು-ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ನೆಲಮಂಗಲ ಯೋಜನಾ ಪ್ರಾಧಿಕಾರ, ಕನಕಪುರ ಯೋಜನಾ ಪ್ರಾಧಿಕಾರ, ಮಾಗಡಿ ಯೋಜನಾ ಪ್ರಾಧಿಕಾರ, ಹೊಸಕೋಟೆ ಯೋಜನಾ ಪ್ರಾಧಿಕಾರ ಮತ್ತು ಆನೇಕಲ್ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, STRR ಇವುಗಳು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿದ್ದು ಒಳಪಟ್ಟಿದ್ದು, ಪ್ರತಿ ನಿಯೋಜನೆ ಮೇಲೆ ಆಯಾ ಪ್ರಾಧಿಕಾರದಲ್ಲಿರುವ ಈ ಇಲಾಖೆಯ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು / ಉಪ ನಿರ್ದೇಶಕರು, ಸದಸ್ಯ-ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪುತ್ತೂರು, ಗೋಕಾಕ್, ಗಂಗಾವತಿ, ಚಿತ್ತಾಪೂರ ವಾಡಿ-ಶಹಾಬಾದ್, ಗೌರಿಬಿದನೂರು, ಕುಶಾಲನಗರ ಮತ್ತು ಮಾಲೂರು ಯೋಜನಾ ಪ್ರಾಧಿಕಾರಗಳ ಸದಸ್ಯ-ಕಾರ್ಯದರ್ಶಿಯಾಗಿ ಸಹಾಯಕ ನಿರ್ದೇಶಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. ನಗರ ಮತ್ತು ಗ್ರಾಮಾಂತರ ಯೋಜನಾ ಅಪರನಿರ್ದೇಶಕರು, ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಉಳಿದ ಪ್ರಾಧಿಕಾರಗಳಲ್ಲಿ ಈ ಇಲಾಖೆಯ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರುಗಳು ಅವರವರ ವ್ಯಾಪ್ತಿಯಲ್ಲಿ ಬರುವ ನಗರ ಯೋಜನಾ ಪ್ರಾಧಿಕಾರಗಳ ಸದಸ್ಯ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಹಾಗೂ ಈ ನಗರ : ಪಟ್ಟಣಗಳ ಮಹಾಯೋಜನೆಗಳ ತಯಾರಿಕೆ ಮತ್ತು ಅನುಷ್ಠಾನಗೊಳಿಸುವ ಕಾರ್ಯವನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಶಾಖಾ ಕಛೇರಿಗಳ ಮೂಲಕ ನಿರ್ವಹಿಸಲಾಗುತ್ತಿದೆ.

## 1.2.3 ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆ :

ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆಯನ್ವಯ ನಗರ ಯೋಜನೆಯು ಸ್ಥಳೀಯ ಸಂಸ್ಥೆಗಳ ಪ್ರಮುಖ ಕರ್ತವ್ಯಗಳಲ್ಲೊಂದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ಪ್ರಸ್ತುತ ಈ ಕೆಳಕಂಡ 76 ನಗರ ಸಭೆ : ಪುರಸಭೆ : ಪಟ್ಟಣ ಪಂಚಾಯಿತಿಗಳಿಗೆ ವಿಸ್ತರಿಸಿ, ನಗರ ಸಭೆ : ಪುರಸಭೆ : ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯನ್ನೇ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿ ಈ ನಗರಸಭೆ : ಪುರಸಭೆ : ಪಟ್ಟಣ ಪಂಚಾಯಿತಿಗಳನ್ನೇ ಯೋಜನಾ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಬೇಕೆಂದು ಸರ್ಕಾರವು ಅಧಿಸೂಚನೆ ಹೊರಡಿಸಿದೆ.

| | | | | | |
|---|---|---|---|---|---|
| 1. | ಭಟ್ಕಳ್ | 26. | ಆಳಂದ | 51. | ಗುಂಡ್ಲುಪೇಟೆ |
| 2 | ಭಾಲ್ಕಿ | 27. | ಜಗಳೂರು | 52. | ನರಸಿಂಹರಾಜಪುರ |
| 3. | ಬೀರೂರು | 28. | ವಿರಾಜಪೇಟೆ | 53. | ಕೊಪ್ಪ |
| 4. | ಬೈಲಹೊಂಗಲ | 29. | ಕಡೂರು | 54. | ಸುಳ್ಯ |
| 5. | ಚಳ್ಳಕೆರೆ | 30. | ಸವದತ್ತಿ | 55. | ರೋಣ |
| 6. | ಚಿಟಗುಪ್ಪ | 31. | ಬೀಳಗಿ | 56. | ಹಳಿಯಾಳ |
| 7. | ತರೀಕೆರೆ | 32. | ಶಿಕಾರಿಪುರ | 57. | ಹೊನ್ನಾವರ |
| 8. | ಬಾಗೇಪಲ್ಲಿ | 33. | ಮುಳಬಾಗಿಲು | 58. | ಸಿದ್ದಾಪುರ |
| 9. | ಗುಳೇದಗುಡ್ಡ | 34. | ನರಗುಂದ | 59. | ಕುಷ್ಟಗಿ |
| 10. | ಸಿರಗುಪ್ಪ | 35. | ನವಲಗುಂದ | 60. | ತೇರದಾಳ |
| 11. | ಹುನಗುಂದ | 36. | ಸಿಂಧಗಿ | 61. | ಬೆಳ್ತಂಗಡಿ |
| 12. | ಕಂಪ್ಲಿ | 37. | ಸವಣೂರು | 62. | ದಾಂಡೇಲಿ |
| 13. | ಕೊಳ್ಳೇಗಾಲ | 38. | ಶಿರಹಟ್ಟಿ | 63. | ಕೆರೂರು |
| 14. | ಕುಮಟ | 39. | ತಾಳಿಕೋಟೆ | 64. | ಕಾರ್ಕಳ |
| 15. | ಲಕ್ಷ್ಮೇಶ್ವರ | 40. | ಬಸವನ-ಬಾಗೇವಾಡಿ | 65. | ಕಿತ್ತೂರು |
| 16. | ಮಧುಗಿರಿ | 41. | ಹೊಳಲ್ಕೆರೆ | 66. | ಕೊರಟಗೆರೆ |
| 17. | ಮಹಾಲಿಂಗಪುರ | 42. | ಹೊಸದುರ್ಗ | 67. | ಮಲೇಬೆನ್ನೂರು |
| 18. | ಯಲಬುರ್ಗಾ | 43. | ಹೊನ್ನಾಳಿ | 68. | ತುರುವೇಕೆರೆ |
| 19. | ಶ್ರೀರಂಗಪಟ್ಟಣ | 44. | ಚನ್ನಗಿರಿ | 69. | ಕಮತಗಿ |
| 20. | ಟಿ. ನರಸೀಪುರ | 45. | ಪಾವಗಡ | 70. | ಪಿರಿಯಾಪಟ್ಟಣ |
| 21. | ಹರಪನಹಳ್ಳಿ | 46. | ಚಿಕ್ಕನಾಯ್ಕನಹಳ್ಳಿ | 71. | ಕುಂದಗೋಳ |
| 22. | ಹಿರಿಯೂರು | 47. | ಮೂಡಲಗಿ | 72 | ಇಂಡಿ |
| 23. | ಹೊಳೆನರಸೀಪುರ | 48. | ಸಕಲೇಶಪುರ | 73. | ಮುದ್ದೇಬಿಹಾಳ |
| 24. | ಹುಮ್ನಾಬಾದ್ | 49. | ಔರಾದ | 74. | ಸೋಮವಾರಪೇಟೆ |
| 25. | ಹಾನಗಲ್ | 50. | ಚಿಕ್ಕೋಡಿ | 75. | ಸೂರಭ |
| | | | | 76. | ನ್ಯಾಮತಿ |

ಮೇಲ್ಕಂಡ ನಗರ: ಪಟ್ಟಣಗಳ ಮಹಾಯೋಜನೆಗಳ ತಯಾರಿಕೆ ಮತ್ತು ಕಾರ್ಯಾನುಷ್ಠಾನದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಅಗತ್ಯ ತಾಂತ್ರಿಕ ಸಿಬ್ಬಂದಿ ನೆರವಿನಿಂದ ಯೋಜನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

**2.0 :<u>ಆಡಳಿತ :</u>**

ಕೇಂದ್ರ ಕಛೇರಿಯಲ್ಲಿ ಇಲಾಖಾ ಮುಖ್ಯಸ್ಥರಾದ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಇಬ್ಬರು ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು, ನಾಲ್ಕು ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ಮತ್ತು ವಿವಿಧ ವೃಂದದ ತಾಂತ್ರಿಕ ಸಿಬ್ಬಂದಿ ನೆರವಿನಿಂದ ಯೋಜನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡುವ ಕೆಲಸ ನಿರ್ವಹಿಸುತ್ತಿದ್ದಾರೆ. ಆಡಳಿತಾತ್ಮಕ ಕಾರ್ಯದಲ್ಲಿ ಪತ್ರಾಂಕಿತ ವ್ಯವಸ್ಥಾಪಕರು, ವ್ಯವಸ್ಥಾಪಕರು ಮತ್ತು ಲೆಕ್ಕಾಧೀಕ್ಷಕರು, ಆಡಳಿತ ಮತ್ತು ಲೆಕ್ಕ ವಿಭಾಗದ ಸಿಬ್ಬಂದಿ ವರ್ಗದವರೊಂದಿಗೆ ನಿರ್ದೇಶಕರಿಗೆ ನೆರವಾಗುತ್ತಿದ್ದಾರೆ.

ವಲಯ, ವಿಭಾಗೀಯ ಮತ್ತು ಜಿಲ್ಲಾಮಟ್ಟದಲ್ಲಿ ಕ್ರಮವಾಗಿ ಒಬ್ಬರು ನಗರ ಮತ್ತು ಗ್ರಾಮಾಂತರ ಯೋಜನಾ ಅಪರ ನಿರ್ದೇಶಕರು, 3 ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರುಗಳು ಮತ್ತು 30 ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರುಗಳು ತಮ್ಮ ಸಿಬ್ಬಂದಿ ವರ್ಗದವರೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ.

ಇಲಾಖೆಯ ಒಂದು ವಲಯ ಕಛೇರಿ, ಧಾರವಾಡದಲ್ಲಿ ಹಾಗೂ ಮೂರು ವಿಭಾಗೀಯ ಕಛೇರಿಗಳು, ಕ್ರಮವಾಗಿ ಕಲಬುರಗಿ, ಮೈಸೂರು ಮತ್ತು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿವೆ.ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದಂತೆ ನಗರ ಮತ್ತು ಗ್ರಾಮಾಂತರ ಯೋಜನಾ ಅಪರನಿರ್ದೇಶಕರು, ಸರ್ಕಾರದ ನಿರ್ದೇಶನದನ್ವಯ ಧಾರವಾಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಭಾಗೀಯ ಮಟ್ಟದಲ್ಲಿ ಜಂಟಿ ನಿರ್ದೇಶಕರು ಮತ್ತು ಜಿಲ್ಲಾ ಮಟ್ಟದಲ್ಲಿ ಸಹಾಯಕ ನಿರ್ದೇಶಕರುಗಳು ಅವರ ವ್ಯಾಪ್ತಿಗೆ ಸಂಬಂಧಿಸಿದ ತಾಂತ್ರಿಕ ಹಾಗೂ ಆಡಳಿತಾತ್ಮಕ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾರೆ.

**2.1: <u>ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕಾಯ್ದೆಗಳು:</u>**

- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961
- ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987

**3.0. ಕಾರ್ಯಕ್ರಮ ಮತ್ತು ಸಾಧನೆ :**

**3.1. ನಗರಾಭಿವೃದ್ಧಿ ಪ್ರಾಧಿಕಾರ, ಯೋಜನಾ ಪ್ರಾಧಿಕಾರ, ನಗರಸಭೆ ಮತ್ತು ಪುರಸಭೆಗಳಿಗೆ ಯೋಜನಾ ವಿಷಯಗಳಲ್ಲಿ ತಾಂತ್ರಿಕ ನೆರವು ನೀಡುವುದು:**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು 162 ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಈಗಾಗಲೇ ವಿಸ್ತರಿಸಲಾಗಿದ್ದು, ಉಳಿದ ಪಟ್ಟಣ ಪ್ರದೇಶಗಳನ್ನು ಈ ಉದ್ದೇಶಕ್ಕಾಗಿ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿ ಪ್ರತ್ಯೇಕ ಯೋಜನಾ ಪ್ರಾಧಿಕಾರಗಳನ್ನು ರಚಿಸುವ ಬದಲು ಸಂಬಂಧಿಸಿದ ನಗರಸಭೆ: ಪುರಸಭೆ: ಪಟ್ಟಣ ಪಂಚಾಯಿತಿಗಳನ್ನೇ ಯೋಜನಾ ಪ್ರಾಧಿಕಾರಗಳಾಗಿ ರಚಿಸಲು ಸರ್ಕಾರವು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಸದರಿ ಸ್ಥಳೀಯ ಯೋಜನಾ ಪ್ರದೇಶಗಳಿಗೆ ಮಹಾಯೋಜನೆಗಳನ್ನು ತಯಾರಿಸುವಲ್ಲಿ ಹಾಗೂ ನಕ್ಷೆಯಲ್ಲಿ ಸೂಚಿಸುವ ಪ್ರಸ್ತಾವನೆಗಳನ್ನು ಜಾರಿಗೊಳಿಸುವಲ್ಲಿ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯ ಸಹಕಾರ ನೀಡುತ್ತಿದ್ದು, ಈ ಕ್ರಮವು ಸಂವಿಧಾನದ 74ನೇ ತಿದ್ದುಪಡಿಯ ಉದ್ದೇಶಗಳಿಗೂ ಅನುಗುಣವಾಗಿರುತ್ತದೆ.

**3.2. ಮಹಾಯೋಜನೆಗಳು (ಮಹಾಯೋಜನೆ ತಾತ್ಕಾಲಿಕ, ಮಹಾಯೋಜನೆ ಅಂತಿಮ, ಮಹಾಯೋಜನೆ (ಪರಿಷ್ಕೃತ) ತಾತ್ಕಾಲಿಕ, ಮಹಾಯೋಜನೆ (ಪರಿಷ್ಕೃತ) ಅಂತಿಮ :**

**ಇಲಾಖೆಯು ಯೋಜನಾ ಪ್ರಾಧಿಕಾರಗಳಿಗೆ:** ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಮಹಾಯೋಜನೆ ತಯಾರಿಸುವಲ್ಲಿ ಮತ್ತು ಜಾರಿಗೆ ತರುವ ಕಾರ್ಯದಲ್ಲಿ ತಾಂತ್ರಿಕ ನೆರವು ನೀಡುವುದನ್ನು ಮುಂದುವರಿಸಿಕೊಂಡು ಬಂದಿದೆ.

ಸದರಿ ಅವಧಿಯಲ್ಲಿ ಈ ಕೆಳಕಂಡ ಮಹಾಯೋಜನೆಗಳನ್ನು ಸಿದ್ಧಪಡಿಸಿ ಸರ್ಕಾರದ ಅನುಮತಿ ಪಡೆಯುವಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಅಗತ್ಯ ನೆರವು ನೀಡಿದೆ.ಹಾಗೂ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಷ್ಠಾನಗೊಳಿಸಲು ಕ್ರಮ ಜರುಗಿಸಿದೆ.

**I. ಸರ್ಕಾರದಿಂದ ತಾತ್ಕಾಲಿಕ ಅನುಮೋದನೆಗೊಂಡಿರುವ ಮಹಾಯೋಜನೆ:**

| ಕ್ರ. ಸಂ | ಹೆಸರು | ಅನುಮೋದನೆಯಾದ ದಿನಾಂಕ |
|---|---|---|
| 1 | ಪಾವಗಡ | 30-05-2022 |
| 2 | ಕುಣಿಗಲ್ | 17-01-2023 |
| 3 | ಸುಳ್ಯಾ | 09-11-2022 |
| 4. | ಕೊಪ್ಪ | 20-09-2022 |
| 5. | ಯಲಬುರ್ಗಾ | 28-03-2023 |
| 6. | ವಾಡಾ | 04-03-2023 |
| 7. | ಎನ್. ಆರ್.ಪುರ | 18-03-2023 |

**II. ಸರ್ಕಾರದಿಂದ ಅಂತಿಮ ಅನುಮೋದನೆಗೊಂಡಿರುವ ಮಹಾಯೋಜನೆ:**

| ಕ್ರ. ಸಂ | ಹೆಸರು | ಅನುಮೋದನೆಯಾದ ದಿನಾಂಕ |
|---|---|---|
| 1. | ಹೊನ್ನಾಳಿ | 28-11-2022 |
| 2. | ಮಾಲೂರು | 09-05-2022 |
| 3. | ಕುಶಾಲನಗರ | 18-08-2022 |

III. ಸರ್ಕಾರದ ತಾತ್ಕಾಲಿಕ ಅನುಮೋದನೆಗೆ ಸಲ್ಲಿಸಿರುವ ಮಹಾಯೋಜನೆ:

| ಕ್ರ. ಸಂ | ಹೆಸರು | ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ |
|---|---|---|
| 1. | ಮಲೇಬೆನ್ನೂರು | 07-11-2022 |

IV. ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುವ ಮಹಾಯೋಜನೆ:

| ಕ್ರ. ಸಂ | ಹೆಸರು | ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ |
|---|---|---|
| 1 | ಔರಾದ್ | 07-01-2023 |

V. ಸರ್ಕಾರದಿಂದ ತಾತ್ಕಾಲಿಕ ಅನುಮೋದನೆಗೊಂಡಿರುವ ಮಹಾಯೋಜನೆ (ಪರಿಷ್ಕೃತ- I)

| ಕ್ರ. ಸಂ | ಹೆಸರು | ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ |
|---|---|---|
| 1. | ತಿಪಟೂರು | 16-08-2022 |

VI. ಸರ್ಕಾರದಿಂದ ಅಂತಿಮ ಅನುಮೋದನೆಗೊಂಡಿರುವ ಮಹಾಯೋಜನೆ (ಪರಿಷ್ಕೃತ – I)

| ಕ್ರ. ಸಂ | ಹೆಸರು | ಅನುಮೋದನೆಯಾದ ದಿನಾಂಕ |
|---|---|---|
| 1. | ಶಿರಾ | 12-07-2022 |
| 2. | ಕೊಪ್ಪಳ | 14-07-2022 |
| 3. | ಚಿಕ್ಕಬಳ್ಳಾಪುರ | 18-11-2022 |
| 4. | ಮುಧೋಳ | 04-03-2023 |

VII. ಸರ್ಕಾರದ ತಾತ್ಕಾಲಿಕ ಅನುಮೋದನೆಗೆ ಸಲ್ಲಿಸಿರುವ ಮಹಾಯೋಜನೆ (ಪರಿಷ್ಕೃತ – I)

| ಕ್ರ. ಸಂ | ಹೆಸರು | ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ |
|---|---|---|
| ಯಾವುದು ಇರುವುದಿಲ್ಲ | | |

VIII. ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುವ ಮಹಾಯೋಜನೆ (ಪರಿಷ್ಕೃತ – I)

| ಕ್ರ. ಸಂ | ಹೆಸರು | ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ |
|---|---|---|
| ಯಾವುದು ಇರುವುದಿಲ್ಲ | | |

IX. ಸರ್ಕಾರದಿಂದ ತಾತ್ಕಾಲಿಕ ಅನುಮೋದನೆಗೊಂಡಿರುವ ಮಹಾಯೋಜನೆ (ಪರಿಷ್ಕೃತ – II)

| ಕ್ರ. ಸಂ | ಹೆಸರು | ಅನುಮೋದನೆಯಾದ ದಿನಾಂಕ |
|---|---|---|
| 1. | ಬೈಲಹೊಂಗಲ | 21-11-2022 |
| 2. | ಶಿಕಾರಿಪುರ | 19-11-2022 |

**X. ಸರ್ಕಾರದಿಂದ ಅಂತಿಮ ಅನುಮೋದನೆಗೊಂಡಿರುವ ಮಹಾಯೋಜನೆ (ಪರಿಷ್ಕೃತ – II)**

| ಕ್ರ. ಸಂ | ಹೆಸರು | ಅನುಮೋದನೆಯಾದ ದಿನಾಂಕ |
|---|---|---|
| 1. | ಬಿಜಾಪುರ(ವಿಜಯಪುರ) | 26-04-2022 |
| 2. | ಶಿರಸಿ | 28-11-2022 |
| 3. | ಅರಸೀಕೆರೆ | 31-01-2023 |
| 4. | ದಾವಣಗೆರೆ-ಹರಿಹರ | 16-03-2023 |

**XI. ಸರ್ಕಾರದ ತಾತ್ಕಾಲಿಕ ಅನುಮೋದನೆಗೆ ಸಲ್ಲಿಸಿರುವ ಮಹಾಯೋಜನೆ (ಪರಿಷ್ಕೃತ – II)**

| ಕ್ರ. ಸಂ | ಹೆಸರು | ಅನುಮೋದನೆಯಾದ ದಿನಾಂಕ |
|---|---|---|
| ಯಾವುದು ಇರುವುದಿಲ್ಲ | | |

**XII. ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುವ ಮಹಾಯೋಜನೆ (ಪರಿಷ್ಕೃತ – II)**

| ಕ್ರ. ಸಂ | ಹೆಸರು | ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ |
|---|---|---|
| 1. | ಚಾಮರಾಜನಗರ-ರಾಮಸಮುದ್ರ | 23-02-2023 |

**XIII. ಈ ಕೆಳಗಿನ ಸ್ಥಳಿಯ ಯೋಜನಾ ಪ್ರದೇಶಗಳ ಮಹಾಯೋಜನೆಯನ್ನು ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಲು ಉದ್ದೇಶಿಸಲಾಗಿದ್ದು, ಯೋಜನೆಗಳ ತಯಾರಿಕೆ ಪ್ರಗತಿಯಲ್ಲಿದೆ.**

| | | | | | |
|---|---|---|---|---|---|
| 1. | ತಾಳಿಕೋಟೆ | 17 | ಬೆಳ್ತಂಗಡಿ | 33 | ಬಾಗೇಪಲ್ಲಿ |
| 2. | ಬಸವನಬಾಗೇವಾಡಿ | 18 | ಚಿಕ್ಕೋಡಿ | 34 | CBIC |
| 3. | ಕಮತಗಿ | 19 | ಕುಷ್ಟಗಿ | 35 | ಕೊರಟಗೆರೆ |
| 4. | ಚಿತ್ತಾಪುರ | 20 | ಕಿತ್ತೂರು | | |
| 5. | ಹೊನ್ನಾವರ | 21 | ರೋಣ | | |
| 6. | ಹೊಸದುರ್ಗ | 22 | ಕುಂದಗೋಳ | | |
| 7. | ಶಿಡ್ಲಘಟ್ಟ | 23 | ಶಿರಹಟ್ಟಿ | | |
| 8. | ಸಿದ್ದಾಪುರ | 24 | ಆಳಂದ | | |
| 9. | ಶ್ರೀರಂಗಪಟ್ಟಣ | 25 | STRR | | |
| 10. | ಅರಕಲಗೂಡು | 26 | ಗ್ರೇಟರ್ ಬೆಂಗಳೂರು ಬಿಡದಿ ಸ್ಮಾರ್ಟ್ ಸಿಟಿ | | |
| 11. | ಕುಂದಾಪುರ | 27 | ಟಿ. ನರಸೀಪುರ | | |
| 12. | ತೇರದಾಳ | 28 | ಕಾಪು | | |
| 13. | ಬೀಳಗಿ | 29 | ಹಾನಗಲ್ | | |
| 14. | ಮೂಡಲಗಿ | 30 | ಕಾರ್ಕಳ | | |
| 15. | ದೊಡ್ಡಬಳ್ಳಾಪುರ | 31 | ಪಿರಿಯಾಪಟ್ಟಣ | | |
| 16. | ಹಳಿಯಾಳ | 32 | ತುರುವೇಕೆರೆ | | |

**XIV.** **ಈ ಕೆಳಗಿನ ಸ್ಥಳಿಯ ಯೋಜನಾ ಪ್ರದೇಶಗಳ ಮಹಾಯೋಜನೆ (ಪರಿಷ್ಕೃತ – I) ನ್ನು ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಲು ಉದ್ದೇಶಿಸಲಾಗಿದ್ದು, ಯೋಜನೆಗಳ ತಯಾರಿಕೆ ಪ್ರಗತಿಯಲ್ಲಿದೆ.**

| | | | |
|---|---|---|---|
| 1. | ಮಹಾಲಿಂಗಪುರ | 8. | ಶಹಾಪೂರ |
| 2. | ಕುಮಟಾ | 9. | ಸಿರಗುಪ್ಪ |
| 3. | ಮಳವಳ್ಳಿ | 10. | ಮಾನ್ವಿ |
| 4. | ಮುದ್ದೇಬಿಹಾಳ | 11. | ಸಿಂಧನೂರು |
| 5. | ನವಲಗುಂದ | 12. | ಪುತ್ತೂರು |
| 6. | ಇಳಕಲ್ | 13. | ಜಗಳೂರು |
| 7. | ಭಟ್ಕಳ | | |

**XV.** **ಈ ಕೆಳಗಿನ ಸ್ಥಳಿಯ ಯೋಜನಾ ಪ್ರದೇಶಗಳ ಮಹಾಯೋಜನೆ (ಪರಿಷ್ಕೃತ – I) ನ್ನು ಸರ್ಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸಲು ಉದ್ದೇಶಿಸಲಾಗಿದ್ದು, ಯೋಜನೆಗಳ ತಯಾರಿಕೆ ಪ್ರಗತಿಯಲ್ಲಿದೆ.**

| | |
|---|---|
| 1. | ಕಂಪ್ಲಿ |
| 2. | ಕೊಳ್ಳೇಗಾಲ |
| 3. | ಭಾಲ್ಕಿ |
| 4. | ಸವಣೂರು |

**XVI.** **ಈ ಕೆಳಗಿನ ಸ್ಥಳಿಯ ಯೋಜನಾ ಪ್ರದೇಶಗಳ ಮಹಾಯೋಜನೆ (ಪರಿಷ್ಕೃತ – II) ನ್ನು ಸರ್ಕಾರದ ತಾತ್ಕಾಲಿಕಅನುಮೋದನೆಗಾಗಿ ಸಲ್ಲಿಸಲು ಉದ್ದೇಶಿಸಲಾಗಿದ್ದು, ಯೋಜನೆಗಳ ತಯಾರಿಕೆ ಪ್ರಗತಿಯಲ್ಲಿದೆ.**

| | |
|---|---|
| 1. | ಮಂಡ್ಯ |
| 2. | ಗದಗ - ಬೆಟಗೇರಿ |
| 3. | ಉಡುಪಿ |
| 4. | ಬಸವಕಲ್ಯಾಣ |

**XVII.** **ಈ ಕೆಳಗಿನ ಸ್ಥಳೀಯ ಯೋಜನಾ ಪ್ರದೇಶಗಳ ಮಹಾಯೋಜನೆ (ಪರಿಷ್ಕೃತ – II) ನ್ನು ಸರ್ಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸಲು ಉದ್ದೇಶಿಸಲಾಗಿದ್ದು, ಯೋಜನೆಗಳ ತಯಾರಿಕೆ ಪ್ರಗತಿಯಲ್ಲಿದೆ.**

| |
|---|
| ಯಾವುದು ಇರುವುದಿಲ್ಲ |

**XVIII.** **ಅಮೃತ್ ಯೋಜನೆಯಡಿ ಈ ಕೆಳಕಂಡ ನಗರ / ಪಟ್ಟಣಗಳಿಗೆ (ಬೆಂಗಳೂರು ಹೊರತುಪಡಿಸಿ) GIS ಆಧಾರಿತ ಮಹಾಯೋಜನೆ ತಯಾರಿಕೆ ಪ್ರಗತಿಯಲ್ಲಿರುತ್ತದೆ.**

| | | | |
|---|---|---|---|
| 1. | ಬಾದಾಮಿ | 14 | ಹೊಸಪೇಟೆ |
| 2. | ಬಾಗಲಕೋಟೆ | 15 | ಕಲಬುರಗಿ |
| 3. | ಬೆಳಗಾವಿ | 16 | ಕೋಲಾರ |
| 4. | ಬಳ್ಳಾರಿ | 17 | ಮಂಡ್ಯ |

| | | | |
|---|---|---|---|
| 5. | ಭದ್ರಾವತಿ | 18 | ಮಂಗಳೂರು |
| 6. | ಬೀದರ್ | 19 | ಮೈಸೂರು |
| 7. | ಚಿಕ್ಕಮಗಳೂರು | 20 | ರಾಯಚೂರು |
| 8. | ಚಿತ್ರದುರ್ಗ | 21 | ರಾಣೇಬೆನ್ನೂರು |
| 9. | ದಾವಣಗೆರೆ | 22 | ರಾಬರ್ಟ್ಸನ್‌ಪೇಟೆ |
| 10. | ಧಾರವಾಡ | 23 | ಶಿವಮೊಗ್ಗ |
| 11. | ಗದಗ - ಬೆಟಗೇರಿ | 24 | ತುಮಕೂರು |
| 12. | ಗಂಗಾವತಿ | 25 | ಉಡುಪಿ |
| 13. | ಹಾಸನ | 26 | ವಿಜಯಪುರ |

**XIX. ಇಲಾಖೆಯಿಂದ ತತ್ವಾಧಾರಿತ ವಿಷಯಗಳ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಕುರಿತು ವಿವರ ಈ ಕೆಳಕಂಡಂತೆ ಇರುತ್ತದೆ.**

1. Ease of Doing Business ನ ಉಪಕ್ರಮದಲ್ಲಿ ಕಟ್ಟಡ ನಕ್ಷೆ ಅನುಮೋದನೆ, ವಿನ್ಯಾಸ ನಕ್ಷೆ ಅನುಮೋದನೆ ಹಾಗೂ ಭೂ-ಉಪಯೋಗ ಬದಲಾವಣೆಯನ್ನು ಆನ್‌ಲೈನ್ ಮುಖಾಂತರ ನೀಡಲು ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗುತ್ತಿದೆ. LBPAS (Land and Building Plan Approval System) ರಲ್ಲಿ Auto Plan ತಂತ್ರಾಂಶವನ್ನು ಉಪಯೋಗಿಸಿಕೊಂಡು ನಕ್ಷೆಗಳನ್ನು ಸ್ವಯಂಚಾಲಿತವಾಗಿ ಪರಿಶೀಲಿಸಿ, ಆನ್‌ಲೈನ್ ಮುಖಾಂತರ ಅನುಮೋದನೆಯನ್ನು ರಾಜ್ಯದಲ್ಲಿನ ಎಲ್ಲಾ ನಗರ/ಪಟ್ಟಣಗಳಲ್ಲಿ ನೀಡಲಾಗುತ್ತಿದೆ.

   ಭೂ-ಉಪಯೋಗ ಬದಲಾವಣೆ ಹಾಗೂ ವಿನ್ಯಾಸ ನಕ್ಷೆಗಳಿಗೆ ಆನ್‌ಲೈನ್ ಮುಖಾಂತರ ಅನುಮೋದನೆ ನೀಡಲು ತಂತ್ರಾಂಶವನ್ನು ತಯಾರಿಸಿದ್ದು, ಈಗಾಗಲೇ 13 ನಗರ / ಪಟ್ಟಣಗಳಲ್ಲಿ ಭೂ ಉಪಯೋಗ ಬದಲಾವಣೆ ಪ್ರಕರಣಗಳನ್ನು ಹಾಗೂ 16 ನಗರ / ಪಟ್ಟಣಗಳಲ್ಲಿ ವಿನ್ಯಾಸ ಅನುಮೋದನೆ ಪ್ರಕರಣಗಳನ್ನು LBPAS ತಂತ್ರಾಂಶ ಬಳಸಿ ಆನ್‌ಲೈನ್ ಮುಖಾಂತರ ಅನುಮೋದನೆ ನೀಡಲು ಈ ಕಛೇರಿಯ ಪತ್ರ ದಿನಾಂಕ: 19-02-2020ರಲ್ಲಿ ತಿಳಿಸಲಾಗಿರುತ್ತದೆ. ಸದರಿ ತಂತ್ರಾಂಶವನ್ನು ಅನುಷ್ಠಾನಗೊಳಿಸುವಲ್ಲಿ ಉದ್ಭವಿಸಬಹುದಾದ ನ್ಯೂನ್ಯತೆಗಳನ್ನು ಪರಿಶೀಲಿಸಿಕೊಂಡು ರಾಜ್ಯದಲ್ಲಿನ ಎಲ್ಲಾ ಪ್ರಾಧಿಕಾರಗಳಿಗೆ ವಿಸ್ತರಿಸಲಾಗುವುದು.

2. ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾದ “AMRUT” ಯೋಜನೆಯಡಿ ರಾಜ್ಯದ 26 ನಗರ/ಪಟ್ಟಣಗಳನ್ನು ಆಯ್ಕೆ ಮಾಡಲಾಗಿದ್ದು, ಸದರಿ 26 ನಗರ/ಪಟ್ಟಣಗಳಿಗೆ GIS ಆಧಾರಿತ ಮೂಲನಕ್ಷೆಯನ್ನು ತಯಾರಿಸಿ ಮಹಾಯೋಜನೆ ತಯಾರಿಕೆ ಸಂಬಂಧ ವಿವಿಧ ಹಂತಗಳ ಕಾರ್ಯಗಳು ಪ್ರಗತಿಯಲ್ಲಿದೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಸದರಿ ಯೋಜನೆಗೆ ನೋಡಲ್ ಏಜೆನ್ಸಿ ಆಗಿರುತ್ತದೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಸದರಿ 26 ನಗರ/ಪಟ್ಟಣಗಳಿಗೆ ಮೂಲನಕ್ಷೆಗಳನ್ನು ತಯಾರಿಸುವ ಸಂಬಂಧ KSRSAC ರವರೊಂದಿಗೆ ಒಪ್ಪಂದದ ಕರಾರು ಮಾಡಿಕೊಂಡಿದ್ದು, ಸಂಬಂಧಪಟ್ಟ ಪ್ರಾಧಿಕಾರಗಳು ಮೂಲ ನಕ್ಷೆಯ Updation ಕಾರ್ಯವನ್ನು ನಿರ್ವಹಿಸುತ್ತಿರುತ್ತವೆ. ಮೂಲನಕ್ಷೆ ತಯಾರಿಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಮುಂದುವರೆದು, ಸದರಿ 26 ನಗರ / ಪಟ್ಟಣಗಳಿಗೆ ಟೆಂಡರ್ ನೀಡಲಾಗಿದ್ದು, ಮಹಾಯೋಜನೆ ತಯಾರಿಕೆ ಕಾರ್ಯ ಪ್ರಗತಿಯಲ್ಲಿರುತ್ತದೆ.

**3.3. ಸ್ಥಳೀಯ ಸಂಸ್ಥೆಗಳು, ವಸತಿ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಸರ್ಕಾರಿ/ ಅರೆ ಸರ್ಕಾರಿ ಸಂಸ್ಥೆಗಳು ಮತ್ತು ಇತರೆ ಇಲಾಖೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು.**

ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಇತರೆ ಅಭಿವೃದ್ಧಿ ಸಂಸ್ಥೆಗಳಿಗೆ ರೂಪರೇಖೆಗಳನ್ನು ಸಿದ್ಧಪಡಿಸಲು ತಾಂತ್ರಿಕ ನೆರವು / ಸಲಹೆಗಳನ್ನು ನೀಡುವುದನ್ನು ಇಲಾಖೆಯು ಮುಂದುವರಿಸಿಕೊಂಡು ಬಂದಿದೆ. ಸ್ಥಳೀಯ ಸಂಸ್ಥೆಗಳ ಯೋಜನೆಗಳನ್ನು, ಪುನರ್ವಸತಿ ಯೋಜನೆಗಳನ್ನು ಮತ್ತು ನಿವೇಶನ ರಹಿತರಿಗೆ ಆಶ್ರಯ ಯೋಜನೆಯಡಿಯಲ್ಲಿ ತಯಾರಿಸುವ ರೂಪರೇಖೆಗಳನ್ನು ಸಿದ್ಧಪಡಿಸಿಕೊಡಲಾಗಿದೆ.

**3.4. ಕಂದಾಯ ಇಲಾಖೆಗೆ ನೀಡಲಾದ ತಾಂತ್ರಿಕ ಅಭಿಪ್ರಾಯ:**
ಪ್ರಸಕ್ತ ಸಾಲಿನಲ್ಲಿ ಇಲಾಖೆಯಿಂದ 30995 ಪ್ರಕರಣಗಳಿಗೆ ವ್ಯವಸಾಯ ಜಮೀನಿನಿಂದ ವ್ಯವಸಾಯೇತರ ಉಪಯೋಗಕ್ಕೆ ಭೂ ಪರಿವರ್ತಿಸಲು ತಾಂತ್ರಿಕ ಅಭಿಪ್ರಾಯ ನೀಡಲಾಗಿದೆ.

**3.4 (ಎ) ರೂಪರೇಖಾ ನಕ್ಷೆಗಳು :**

ಪ್ರಸಕ್ತ ಸಾಲಿನಲ್ಲಿ 4606 ರೂಪರೇಖೆಗಳಿಗೆ ತಾಂತ್ರಿಕ ಅನುಮೋದನೆ ನೀಡಿದ್ದು, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಅನುಷ್ಠಾನಗೊಳಿಸಲು ಕಳುಹಿಸಲಾಗಿದೆ.

**3.5. ಇಲಾಖೆ ಯೋಜನೆಗಳು (2022-23):**

2022-23ನೇ ಸಾಲಿಗೆ ರೂ.2610.40 ಲಕ್ಷಗಳನ್ನು ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳಿಗೆ ವೆಚ್ಚ ಭರಿಸಲು ಸರ್ಕಾರದಿಂದ ಅನುದಾನ ಒದಗಿಸಲಾಗಿದ್ದು, ಅದರಲ್ಲಿ ಮಾರ್ಚ್- 2023 ರ ಅಂತ್ಯದವರೆಗೆ ರೂ. 2014.90 ಲಕ್ಷ ವೆಚ್ಚ ಭರಿಸಲಾಗಿದ್ದು, ಉಳಿಕೆ ರೂ.603.11 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

**ಲೆಕ್ಕ ಶೀರ್ಷಿಕೆ:**
2217-05-001-1-01 – ವೇತನ ಮತ್ತು ಭತ್ಯೆಗಳು.

ವೆಚ್ಚ (ರೂ. ಲಕ್ಷಗಳಲ್ಲಿ)

| 2022-23ನೇ ಸಾಲಿಗೆ ಬಿಡುಗಡೆ ಮಾಡಿರುವ ಅನುದಾನ | 2022-23 ನೇ ಸಾಲಿನ ವೆಚ್ಚ | |
|---|---|---|
| | ಬಂಡವಾಳ | ರಾಜಸ್ವ |
| 2610.40 | 2014.90 | 279.40 |

**3.6 ಮುಂಗಡ ಪತ್ರ ಪ್ರಸ್ತಾವನೆ (2023-24):**
2023-24ನೇ ಸಾಲಿನ ಲೆಕ್ಕ ಶೀರ್ಷಿಕೆ 2217-05-001-1-01 ರಡಿಯಲ್ಲಿ ರೂ. 2622.90 ಲಕ್ಷಗಳ ಅನುದಾನವನ್ನು ಸರ್ಕಾರದಿಂದ ಒದಗಿಸಲಾಗಿದೆ.

1. <u>ಮಾನವ ಸಂಪನ್ಮೂಲ ಹಾಗೂ ಆಡಳಿತ ವರದಿ</u>

**4(ಎ)1. ಅನುಮೋದಿತ ಹುದ್ದೆಗಳು: ಭರ್ತಿಯಾದ ಹುದ್ದೆಗಳ ವಿವರ ಈ ರೀತಿ ಇರುತ್ತದೆ.**

| **ವೃಂದ ಗುಂಪು** | **ಅನುಮೋದಿತವಾಗಿರುವುವು** | **ಭರ್ತಿಯಾಗಿರುವುವು** |
|---|---|---|
| ಗುಂಪು ಎ | 260 | 239 |
| ಗುಂಪು ಬಿ | 179 | 106 |
| ಗುಂಪು ಸಿ | 379 | 98 |
| ಗುಂಪು ಡಿ | 92 | 25 |
| **ಒಟ್ಟು** | **910** | **468** |

**4(ಎ)2. ಲಿಂಗ ವಿವರಗಳು:**

| **ವೃಂದ ಗುಂಪು** | **ಪುರುಷರು** | **ಸ್ತ್ರೀಯರು** |
|---|---|---|
| ಗುಂಪು ಎ | 160 | 79 |
| ಗುಂಪು ಬಿ | 87 | 19 |
| ಗುಂಪು ಸಿ | 62 | 36 |
| ಗುಂಪು ಡಿ | 14 | 11 |
| **ಒಟ್ಟು** | **323** | **145** |

**4(ಎ) 3. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಪ್ರಾತಿನಿಧ್ಯತೆ (ಗುಂಪುವಾರು)**

| **ವೃಂದ ಗುಂಪು** | **ಪರಿಶಿಷ್ಟ ಜಾತಿ** | **ಪರಿಶಿಷ್ಟ ವರ್ಗ** |
|---|---|---|
| ಗುಂಪು ಎ | 46 | 10 |
| ಗುಂಪು ಬಿ | 21 | 05 |
| ಗುಂಪು ಸಿ | 18 | 08 |
| ಗುಂಪು ಡಿ | 07 | 03 |
| **ಒಟ್ಟು** | **92** | **26** |

(ಬಿ). ದಿನಾಂಕ:31-03-2023 ರಲ್ಲಿದ್ದಂತೆ ಖಾಲಿ ಹುದ್ದೆಗಳು ಹಾಗೂ ಮುಂದಿನ ವರ್ಷದಲ್ಲಿ ನಿವೃತ್ತಿಯಾಗಲಿರುವ ಮಾಹಿತಿಯ ತಖ್ತೆ:

| ಕ್ರಮ ಸಂಖ್ಯೆ | ಹುದ್ದೆಗಳ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | | ನಿವೃತ್ತಿಯಾಗಲಿರುವವರ ಸಂಖ್ಯೆ | |
|---|---|---|---|---|---|
| | | ಇಲಾಖೆ | ನಿಯೋಜನೆ | ಇಲಾಖೆ | ನಿಯೋಜನೆ |
| 1. | ನಿರ್ದೇಶಕರು | 0 | 0 | 0 | 1 |
| 2. | ಅಪರ ನಿರ್ದೇಶಕರು | 0 | 1 | 0 | 0 |
| 3. | ಜಂಟಿ ನಿರ್ದೇಶಕರು | 0 | 0 | 0 | 2 |
| 4. | ಉಪ ನಿರ್ದೇಶಕರು | 0 | 1 | 0 | 1 |
| 5. | ಸಹಾಯಕ ನಿರ್ದೇಶಕರು | 0 | 19 | 0 | 0 |
| 6. | ನಗರ ಯೋಜಕರು | 5 | 67 | 0 | 0 |
| 7. | ಸಹಾಯಕ ನಗರ ಯೋಜಕರು | 103 | 83 | 0 | 0 |
| 8. | ಮಾಡೆಲ್ ಮೇಕರ್ | 1 | 0 | 0 | 0 |
| 9. | ಪತ್ರಾಂಕಿತ ವ್ಯವಸ್ಥಾಪಕರು | 0 | 0 | 0 | 0 |
| 10. | ವ್ಯವಸ್ಥಾಪಕರು | 0 | 1 | 0 | 0 |
| 11. | ಲೆಕ್ಕಾಧೀಕ್ಷಕರು | 0 | 0 | 0 | 0 |
| 12. | ಅಧೀಕ್ಷಕರು | 0 | 0 | 2 | 0 |
| 13. | ಪ್ರಥಮ ದರ್ಜೆ ಸಹಾಯಕರು | 6 | 0 | 0 | 0 |
| 14. | ಶೀಘ್ರಲಿಪಿಗಾರರು | 6 | 9 | 0 | 0 |
| 15. | ದ್ವಿತೀಯ ದರ್ಜೆ ಸಹಾಯಕರು | 9 | 2 | 0 | 0 |
| 16. | ಛಾಯಾ ಮುದ್ರಕರು | 3 | 0 | 0 | 0 |
| 17. | ಕಂಪ್ಯೂಟರ್ ಆಪರೇಟರ್ | 1 | 0 | 0 | 0 |
| 18. | ಹಿರಿಯ ಬೆರಳಚ್ಚುಗಾರರು | 3 | 0 | 0 | 0 |
| 19. | ಬೆರಳಚ್ಚುಗಾರರು | 36 | 0 | 0 | 0 |
| 20. | ಹಿರಿಯ ವಾಹನ ಚಾಲಕರು | 0 | 0 | 2 | 0 |
| 21. | ವಾಹನ ಚಾಲಕರು | 19 | 0 | 0 | 0 |
| 22. | ಅನುಚಾರಕರು | 6 | 0 | 0 | 0 |
| 23. | ಸೇವಕರು | 61 | 0 | 1 | 0 |
| | **ಒಟ್ಟು** | **259** | **183** | **4** | **4** |

4(ಸಿ).**ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಈ ಕೆಳಕಂಡಂತೆ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ.**

| ಕ್ರಮ | ಸಂಖ್ಯೆ ಖಾಲಿ ಇರುವ ಹುದ್ದೆಗಳು | ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾದ ಹುದ್ದೆಗಳ ಸಂಖ್ಯೆ |
|---|---|---|
| 1. | ವಾಹನ ಚಾಲಕರು | 05 |
| 2. | ಬೆರಳಚ್ಚುಗಾರರು | 35 |
| 3. | ಗ್ರೂಪ್ - ಡಿ | 27 |

4(ಡಿ) ಮತ್ತು 4(ಇ) - ಅನ್ವಯಿಸುವುದಿಲ್ಲ.

4(ಎಫ್). ಇಲಾಖಾ ಮುಖ್ಯಸ್ಥರ ಪ್ರವಾಸ: ಏಪ್ರಿಲ್ 2022 ರಿಂದ ಮಾರ್ಚ್-2023

ಶ್ರೀ ಎಲ್. ಶಶಿಕುಮಾರ್ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಇವರ ಪ್ರವಾಸದ ವಿವರ

| | | |
|---|---|---|
| 1. | ಹುಬ್ಬಳಿ-ಧಾರವಾಡ | ದಿ: 22-05-2022 ಮತ್ತು 23-05-2022 |
| 2. | ಮಂಗಳೂರು | ದಿ: 30-05-2022 ಮತ್ತು 31-05-2022 |
| 3. | ಮೈಸೂರು | ದಿ: 15-06-2022 ಮತ್ತು 16-06-2022 |
| 4. | ಗದಗ -ಹೊಸಪೇಟೆ | ದಿ: 11-07-2022 ರಿಂದ 13-07-2022 |
| 5. | ಗದಗ -ಹಾವೇರಿ | ದಿ:03-08-2022 ರಿಂದ 05-08-2022 |
| 6. | ಉಡುಪಿ | ದಿ: 09-02-2023 ರಿಂದ 10-02-2023 |

**2. ಕಾರ್ಯನಿರ್ವಹಣಾ ಕ್ಷಮತೆ:**

**5.1 ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸ್ವೀಕರಿಸಿರುವ ಅರ್ಜಿಗಳ ವಿವರ:**

2022-23ನೇ ಸಾಲಿನ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ 491ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಎಲ್ಲಾ ಅರ್ಜಿಗಳು ಇತ್ಯರ್ಥಗೊಳಿಸಲಾಗಿದೆ.

**5.2 ನ್ಯಾಯಾಲಯದ ಪ್ರಕರಣ:**

**ಆಡಳಿತ ಶಾಖೆ:** ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರನ್ನು ಪ್ರತಿವಾದಿಯನ್ನಾಗಿ 9 ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲಾಗಿರುತ್ತದೆ.

**ತಾಂತ್ರಿಕ ಶಾಖೆ:** ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರನ್ನು ಪ್ರತಿವಾದಿಯನ್ನಾಗಿ 37 ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲಾಗಿರುತ್ತದೆ.

**5.3 ಅಧಿವೇಶನದ ಪ್ರಶ್ನೆಗಳು:**

2022-23 ನೇ ಸಾಲಿನಲ್ಲಿ ನಡೆದ ವಿಧಾನಸಭೆ /ವಿಧಾನ ಪರಿಷತ್ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ 124 ಪ್ರಶ್ನೆಗಳನ್ನು ಸ್ವೀಕರಿಸಿದ್ದು ಸದರಿ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಲಾಗಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರು

# GOVERNMENT OF KARNATAKA

# TOWN AND COUNTRY PLANNING DEPARTMENT

# ANNUAL REPORT

# 2022-23

**DIRECTORATE OF TOWN AND COUNTRY PLANNING**

**BENGALURU**

**Telephone: 080-22353976, 22258988, 22353974 Fax: 22389519,**

**e-mail:**dtcp@karnataka.gov.in**Website:**www.dtcp.gov.in

# Present Organisation Structure



# DEPARTMENT OF TOWN AND COUNTRY PLANNING
# ANNUAL REPORT FOR THE YEAR 2022-23

## 1. Introduction

Department of Town and Country Planning has its central office at Bengaluru headed by the Director of Town and Country Planning During the year 2022-23, the Department has functioned headed by the following officers.

Sri L. Shashikumar - 01-04-2022 to 31-03-2023

It has four Divisional Offices at Bengaluru, Mysuru, Kalaburagi Headed by Joint Directors and Zonal Office at Dharwad Headed by Additional Director and there are 30 branch offices headed by Assistant Director of Town and Country Planning as Unit Heads serving all the districts in the State.

### 1.1 Activities of the Department:

The Department of Town and Country Planning is mainly involved in the task of preparing Master plans and their enforcement and in extending technical assistance to various Government Departments/Local Bodies for the orderly development of cities, towns and villages. The main functions of the Town and Country Planning Department are;

